## ಮುಂಬೈಯಲ್ಲಿ ರಾಷ್ಟ್ರಮಟ್ಟದ ಪ್ರಪ್ರಥಮ ಶಾಸಕರ ಸಮ್ಮೇಳನ

# ಪ್ರಜಾಪ್ರಭುತ್ವ ಗಟ್ಟಿಗೊಳ್ಳಲು ಶಾಸನ ಸಭೆಗಳು ಕ್ರಿಯಾಶೀಲ

**ಮುಧೋಳ :** ಶಾಸನ ಸಭೆಗಳು ಕ್ರಿಯಾಶೀಲವಾದಾಗಲೇ ಪ್ರಜಾಪ್ರಭುತ್ವ ಗಟ್ಟಿಗೊಳ್ಳಲು ಸಾಧ್ಯವಿದೆ ಎಂದು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದ್ದಾರೆ.

ಮುಂಬೈಯಲಿ ್ಲರಾಷ್ಟ್ರೀಯ ಪ್ರಥಮ ಶಾಸಕರ ಸಭೆಯಲ್ಲಿ ವಿಶೇಷ ಗೋಷ್ಠಿಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪ್ರಜಾಪ್ರಭುತ್ವದ ಮೂಲ ಆಶಯಗಳು ಪರಿಣಾಮಕಾರಿಯಾಗಿ ಅನುಷ್ಠಾನ ಗೊಳಿಸಲು ಸಂವಿಧಾನ ಬದ್ಧವಾಗಿರುವ ಶಾಸನಸಭೆಗಳು ಪಾತ್ರ ಮಹತ್ವದಾಗಿದೆ. 75 ವರ್ಷಗಳ ಸುದೀರ್ಘ ಇತಿಹಾಸ ಹೊಂದಿರುವ ಭಾರತದ ಪ್ರಜಾಪ್ರಭುತ್ವ ವಿಶ್ವಮಾನ್ಯವಾಗಿದೆ. ಇಂತಹ ಶ್ರೇಷ್ಠತೆಯುಳ್ಳ ಮೌಲ್ಯಯುಳ್ಳ ಪ್ರಜಾಪ್ರಭುತ್ವ ಬೇರುಗಳು ಗಟ್ಟಿಗೊಳ್ಳಬೇಕಾಗಿದೆ. ಸದನಗಳು ಕೇವಲ ಮಾತಿನ ಮಂಟಪ ಸೃಷ್ಟಿಸುವ ವೇದಿಕೆಯಾಗದೇ ಸಮರ್ಪಕವಾಗಿ ಜನರ ಸೇವೆ ಮಾಡಲು ಯುವಕರಿಗೆ ಪ್ರೇರಣೆಯಾಗಬೇಕಾಗಿದೆ. ಜನರ ಬದುಕು ಬವಣೆ ಹಾಗೂ ಸಂಕಷ್ಟಗಳಿಗೆ ಸ್ಪಂದಿಸುವ ಸೂಕ್ತ ಪರಿಹಾರಕಲ್ಪಿಸಲು ಆಡಳಿತಶಾಯಿಗೆ ಮಾರ್ಗದರ್ಶನ ಮಾಡಬೇಕೆಂದರು.



ಮುಂಬೈಯಲ್ಲಿ ನಡೆದ ರಾಷ್ಟ್ರೀಯ ಸಭಾಪತಿಗಳ ಸಮ್ಮೇಳನದಲ್ಲಿ ಮೇಲ್ಮನೆ ಸಭಾಪತಿ ಬಸವರಾಜ ಹೊರಟ್ಟಿ ಪಾಲ್ಗೊಂಡಿದ್ದರು.

ಜಾತಿ, ಮತ, ಪಂಥ ಹಾಗೂ ರಾಜಕೀಯ ಪಕ್ಷಗಳ ಮಾನಸಿಕತೆಯಿಂದ ಮೇಲೆದ್ದು ಜನಪರ ಚಿಂತನೆ ನಡೆಸುವ ತಾಣಗಳಾದಾಗ ಮಾತ್ರ ಪ್ರಜಾಪ್ರಭುತ್ವ ನೈಜ್ಯರೂಪದಲ್ಲಿ ಸಾರ್ಥಕಗೊಳ್ಳುತ್ತದೆ. ಈ ನಿಟ್ಟಿನಲ್ಲಿ ದೇಶದ ಎಲ್ಲಾ ವಿಧಾನಸಭೆ ಹಾಗೂ ಪರಿಷತ್ ಸದಸ್ಯರು ಪೀಠಾಸೇನಾಕಾರಿಗಳು, ಸಂಸದೀಯ ಪಟುಗಳು ಒಕ್ಕೂಟದಿಂದ ಇಂತಹ ಚಿಂತನೆಗಳನ್ನು ನಡೆಸಲು ಸಾಧ್ಯವಿದೆ. ಆರ್ಥಿಕ ಸಬಲೀಕರಣಕ್ಕಾಗಿ ತಂತ್ರಜ್ಞಾನದ ಸದ್ಬಳಿಕೆ ಅವಶ್ಯಕತೆ ಪ್ರತಿಪಾದಿಸಿದ ಸಭಾಪತಿ ಬಸವರಾಜ ಹೊರಟ್ಟಿ ಇಂದಿನ ತಂತ್ರಜ್ಞಾನದಿಂದ ಬಹಳಷ್ಟು ಬದಲಾವಣೆತರಲು ಸಾಧ್ಯವಿದೆ ಎಂದರು.

ಅತಿ ಹೆಚ್ಚಿನ ಸೌಲಭ್ಯಗಳನ್ನು ಜನರಿಗೆ ಸುಲಭವಾಗಿ ತ್ವರಿತಗತಿಯಲ್ಲಿ ಮುಟ್ಟಿಸುವ ಪ್ರಯತ್ನ ನಮ್ಮದಾಗಬೇಕಾಗಿದೆ. ತಮ್ಮನ್ನು ಆರಿಸಿ ಕಳುಹಿಸಿದ ಮತದಾರರ ಆಶಯಗಳಿಗೆ ಅನುಗುಣವಾಗಿ ಬದ್ಧತೆಯಿಂದ ಕೆಲಸ ಮಾಡುವ ಮನೋಭಾವವನ್ನು ಪಕ್ಷಬೇಧ ಮರೆತುಎಲ್ಲ ಜನಪ್ರತಿನಿಗಳು ಬೆಳೆಸಿಕೊಂಡಾಗ ಮಾತ್ರ ದೇಶದ ಅಭಿವೃದ್ಧಿಗೆ ಬೆಂಬಲಿಸಿದ್ದಂತಾಗುತ್ತದೆ. ರಾಜಕೀಯ ಮೌಲ್ಯಗಳು ಕಡಿಮೆಯಾಗುತ್ತಿವೆ ಇದು ವಿಷಾದನೀಯ ಬೆಳವಣಿಗೆಯಾಗಿದೆ ಎಂದು ಅಭಿಪ್ರಾಯಪಟ್ಟರು.

ಲೋಕಸಭಾ ಸ್ಪೀಕರ್ ಓಂ ಬಿರ್ಲಾ, ಮಹಾರಾಷ್ಟ್ರದ ಡಿಸಿಎಂ ದೇವೇಂದ್ರ ಫಡ್ನವೀಸ್, ಮಾಜಿ ಸಭಾಧ್ಯಕ್ಷೆ ಸುಮಿತ್ರಾ ಮಹಾಜನ, ಡಾ.ಮನೋಹರ ಜೋಶಿ, ಡಾ.ಮೀರಾಕುಮಾರ, ವಿಧಾನಸಭೆಯ ಸ್ಪೀಕರ್ ಯು.ಟಿ.ಖಾದರ, ಶಿವರಾಜ ಪಾಟೀಲ ದೇಶದ ಸಂಸದೀಯ ಪಟುಗಳು, ಶಾಸಕರುಇತರರು ಭಾಗವಹಿಸಿದರು.

# ನಿಸರ್ಗ ಫಾರ್ಮ್ ಹೌಸ್‌ಗೆ ರಿಷಭ್ ಶೆಟ್ಟಿ ಭೇಟಿ

**ಹುಬ್ಬಳ್ಳಿ:** ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರ ನಿಸರ್ಗ ಫಾರ್ಮ್ ಹೌಸ್‌ಗೆ ಖ್ಯಾತ ನಟ ರಿಷಭ್ ಶೆಟ್ಟಿ ಭೇಟಿ ನೀಡಿದರು.



ಸುಮಾರು 1 ಗಂಟೆಗಳ ಕಾಲ ಸಂಪೂರ್ಣ ತೋಟವನ್ನು ಸುತ್ತಾಡಿ ವೀಕ್ಷಣೆ ಮಾಡಿ ಅಲ್ಲಿರುವ ಹೈನುಗಾರಿಕೆ, ಸಾವಯವ ಗೊಬ್ಬರ ತಯಾರಿಕೆ, ಚೆಕ್ ಡ್ಯಾಮ್ ನಿರ್ಮಾಣ, ತೋಟಗಾರಿಕೆ ಬೆಳೆಗಳಾದ ಮಾವು, ಚಿಕ್ಕು ಹಾಗೂ ಅಡಿಕೆ ಗಿಡಗಳನ್ನು ನೋಡಿ ಖುಷಿ ಪಟ್ಟರು. ಕೃಷಿಯಿಂದ ವಿಮುಖರಾಗುವ ಇಂದಿನ ದಿನಮಾನದಲ್ಲಿ ಬಸವರಾಜ ಹೊರಟ್ಟಿಯವರ ಕೃಷಿ ಆಸಕ್ತಿಯನ್ನು ನೋಡಿ ಆಶ್ಚರ್ಯ ಚಕಿತರಾದರು. ಸಭಾಪತಿಯಂತಹ ಉನ್ನತ ಹುದ್ದೆಯಲ್ಲಿದ್ದರೂ ತೋಟದ ಬಗ್ಗೆ, ದನಕರುಗಳ ಹಾಗೂ ಪ್ರಾಣಿ-ಪಕ್ಷಿಗಳ ಬಗ್ಗೆ ಇರುವ ಪ್ರೀತಿಯನ್ನು ಕಂಡು ಸಂತೋಷ ಪಟ್ಟರು.

# ಹೊರಟ್ಟಿಯವರ ನಿಸರ್ಗ ಫಾರ್ಮ್‌ಗೆ ನಟ ರಿಷಬ್ ಶೆಟ್ಟಿ ಭೇಟಿ

ಹುಬ್ಬಳ್ಳಿ, ಜೂ. 18. ಎಲ್ಲರೊಂದಿಗೂ ಒಳಗಾಗುವ ವ್ಯಕ್ತಿತ್ವವುಳ್ಳ ಸಭಾಪತಿ ಬಸವರಾಜ ಹೊರಟ್ಟಿ ಅವರ ನೆಚ್ಚಿನ ನಿಸರ್ಗ ಫಾರ್ಮ್‌ಗೆ ಕಾಂತಾರ ಸಿನಿಮಾದ ನಾಯಕ ನಟ ನಿರ್ದೇಶಕ ರಿಷಬ್ ಶೆಟ್ಟಿ ಭೇಟಿ ನೀಡಿ ಬಸವರಾಜ್ ಹೊರಟ್ಟಿ ಅವರ ಕೃಷಿಪ್ರೇಮದ ಕುರಿತು ತಿಳಿದುಕೊಂಡು ಅಚ್ಚರಿ ವ್ಯಕ್ತಪಡಿಸಿದರು.



ನಾಲ್ಕು ದಶಕಗಳ ಸುದೀರ್ಘ ರಾಜಕಾರಣದಲ್ಲಿ ಸಮಾಜಮುಖಿ ಸೇವೆಯೊಂದಿಗೆ ಕೃಷಿ ಕ್ಷೇತ್ರದಲ್ಲಿಯೂ ಸಾಕಷ್ಟು ಬದಲಾವಣೆ ತಂದಿರುವ ಹೊರಟ್ಟಿ ಅವರ ಕೃಷಿ ಚಟುವಟಿಕೆಗಳ ಬಗ್ಗೆ ಹೈನುಗಾರಿಕೆ ಬಗ್ಗೆ ದನ ಕರಗಳ ಬಗ್ಗೆ ಇನ್ನಿತರ ಪ್ರಾಣಿ-ಪಕ್ಷಿಗಳ ಕುರಿತ ಅವರ ಆಸಕ್ತಿ ಬಗ್ಗೆ ತಿಳಿದುಕೊಂಡು ಖುಷಿಪಟ್ಟ ರಿಷಬ್ ಶೆಟ್ಟಿ ಅವರು, ತಾವು ಕೃಷಿಯ ಬಗ್ಗೆ ಇರುವ ಪ್ರೀತಿ ಆಸಕ್ತಿಯ ಬಗ್ಗೆಯೂ ಹೊರಟ್ಟಿ ಅವರೊಂದಿಗೆ ಹಂಚಿಕೊಂಡರು.

ಈ ಸಂದರ್ಭದಲ್ಲಿ ಪತ್ರಕರ್ತ ಅಜಿತ್ ಹನುಮಕ್ಕನವರ್ ಉಪಸ್ಥಿತರಿದ್ದು ಹೊರಟ್ಟಿ ಅವರ ನಾಲ್ಕು ದಶಕಗಳ ರಾಜಕಾರಣ, ಅವರ ಹೋರಾಟಗಳ ಬಗ್ಗೆ ಶಿಕ್ಷಕರ ಪರ ಇರುವ ಅವರ ಕಾಳಜಿ ಕುರಿತು ಸಮಗ್ರ ವಿವರವನ್ನು ರಿಷಬ್ ಶೆಟ್ಟಿ ಅವರಿಗೆ ನೀಡಿದರು.

ಶಿಕ್ಷಕರೊಬ್ಬರು ವಿಧಾನ ಪರಿಷತ್ತಿಗೆ ಎಂಟು ಬಾರಿ ಆಯ್ಕೆಯಾಗಿ ಜಾಗತಿಕ ದಾಖಲೆ ಮಾಡಿದ ಕುರಿತು ಕೇಳಿದಾಗ ಅಚ್ಚರಿ ವ್ಯಕ್ತಪಡಿಸಿದ ರಿಷಬ್ ಶೆಟ್ಟಿಯವರು ಒಂದೇ ಕ್ಷೇತ್ರದಿಂದ ಸತತ ಎಂಟು ಬಾರಿ ಆಯ್ಕೆಯಾಗುವುದು ಇಂದಿನ ರಾಜಕೀಯ ವ್ಯವಸ್ಥೆಯಲ್ಲಿ ಹೇಗೆ? ಸಾಧ್ಯ ಎಂದು ಅಚ್ಚರಿ ವಕ್ತಪಡಿಸಿದರು.



# ನಿಸರ್ಗ ಫಾರ್ಮ್‌ಗೆ ನಟ ರಿಷಬ್ ಶೆಟ್ಟಿ ಭೇಟಿ

**ಹುಬ್ಬಳ್ಳಿ:** ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರ ಮಾಲೀಕತ್ವದ ನಿಸರ್ಗ ಫಾರ್ಮ್‌ಗೆ ನಟ, ನಿರ್ದೇಶಕ ರಿಷಭ್ ಶೆಟ್ಟಿ ಭಾನುವಾರ ಭೇಟಿ ನೀಡಿದರು. ಸುಮಾರು ಒಂದು ಗಂಟೆಯ ಕಾಲ ತೋಟ ವೀಕ್ಷಣೆ ಮಾಡಿ ಅಲ್ಲಿರುವ ಹೈನುಗಾರಿಕೆ, ಸಾವಯವ ಗೊಬ್ಬರ ತಯಾರಿಕೆ, ಚೆಕ್‌ಡ್ಯಾಮ್ ನಿರ್ಮಾಣ, ತೋಟಗಾರಿಕೆ ಬೆಳೆಗಳಾದ ಮಾವು, ಚಿಕ್ಕು ಹಾಗೂ ಅಡಕೆ ಗಿಡಗಳನ್ನು ನೋಡಿ ಸಂತಸ ವ್ಯಕ್ತಪಡಿಸಿದರು. ಈ ವೇಳೆ ವಿಪ ಸಭಾಪತಿ ಬಸವರಾಜ ಹೊರಟ್ಟಿ, ಸುವರ್ಣ ನ್ಯೂಸ್‌ನ ಮುಖ್ಯಸ್ಥ ಅಜಿತ್ ಹನುಮಕ್ಕನವರ ಸೇರಿದಂತೆ ಹಲವರಿದ್ದರು.